# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

## ಕೆ.ಆರ್.ನಗರ

## ಓಎಸ್ 285/2013

ಡಿ ಡಬ್ಲ್ಯೂ-1

**ದಿನಾಂಕ 10-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಶ್ರೀ ಎಲ್. ವಿ.ಆರ್ ವಾದಿ ಪರ ವಕೀಲರುಃ**

ನಮ್ಮ ತಾತ ಕೆಂಚೆಗೌಡರಿಗೇ ಒಟ್ಟು 4 ಜನ ಮಕ್ಕಳು ಅವರುಗಳಲ್ಲಿ 2 ಹೆಣ್ಣು ಮತ್ತು 2 ಗಂಡು ಎಂದರೆ ಸರಿ. ದಾವಾ ಸ್ವತ್ತುಗಳೆಲ್ಲ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಸ್ವಯಾರ್ಜಿತ ಸ್ವತ್ತುಗಳು. ಸದರಿ ದಾವಾ ಸ್ವತ್ತುಗಳು ಸ್ವಯಾರ್ಜಿತ ಆಸ್ತಿಎಂದು ಘೋಷಿಸಲು ಯಾವುದೇ ದಾಖಲಗಳನ್ನು ಹಾಜರು ಪಡಿಸಿರುವುದಿಲ್ಲ. ನಮ್ಮ ತಾತ ಕೆಂಚೆಗೌಡ ಮತ್ತು ಅವರ 4 ಜನ ಮಕ್ಕಳು ಮೌಖಿಕವಾಗಿ ವಿಭಾಗ ಮಾಡಿಕೊಂಡಿರುತ್ತಾರೆ ಆದರೆ ಯಾವುದೇ ವಿಭಾಗ ಪತ್ರ ಆಗಿರುವುದಿಲ್ಲ.

**2**. ಮಣಿ ಮತ್ತು ನಾಗರತ್ನ ಇಬ್ಬರಿಗೂ ಯಾವುದೇ ಜಮೀನು ಅವರ ಭಾಗಕ್ಕೆ ಕೊಟ್ಟಿರುವುದಿಲ್ಲ. ಕೆಲವು ಜಮೀನುಗಳು ಈಗಲೂ ಸಹ ಕೆಂಚೆಗೌಡರ ಹೆಸರಿನಲ್ಲಿ ಇವೆ ಇನ್ನು ಕೆಲವು ಸ್ವತ್ತುಗಳು ನಮ್ಮ ತಂದೆ ಕೃಷ್ಣೆಗೌಡರ ಹೆಸರಿನಲ್ಲಿವೆ. ಸರ್ವೇ ನಂಬರ 111/4 ರ ದಾವಾ 1 ನೇ ಸ್ವತ್ತಿನ ಜಮೀನು ಈಗಲೂ ಸಹ ನಮ್ಮ ತಾತ ಕೆಂಚೆಗೌಡರ ಹೆಸರಿನಲ್ಲಿ ಮುಂದುವರೆದಿದೆ ಎಂದರೆ ಸರಿ. ಸದರಿ ಸರ್ವೆ ನಂಬರ 111/4 ಪಿತ್ರಾರ್ಜಿತ ಆಸ್ತಿ ಎಂದರೆ ಸರಿ.

**3**. ನಿಪಿ 19 ಕ್ರಯ ಪತ್ರಕ್ಕೆ ಕೆಂಚೆಗೌಡನ ಹೆಣ್ಣುಮಕ್ಕಳು ಮತ್ತು 1 ನೇ ಪ್ರತಿವಾದಿ ಕೃಷ್ಣೆಗೌಡ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ 19 ರಲ್ಲಿ ಸದರಿ ಸರ್ವೆ ನಂಬರ 111/4 ಪಿತ್ರಾರ್ಜಿತ ಸ್ವತ್ತು ಎಂದು ನಮೂದಾಗಿದೆ ಎಂದರೆ ಸರಿ. ದಿಃ 30-05-2005 ರಲ್ಲಿ ನಮ್ಮ ತಾತ ಜೀವಂತವಾಗಿದ್ದರು ಅವರ ಸಹಿ ನಿಪಿ 19 ರಲ್ಲಿ ಇರುವುದಿಲ್ಲ. ನಿಪಿ 19 ರಲ್ಲಿ ಯಾವುದೇ ವಿಭಾಗ ಮಾಡಿಕೊಂಡಿರುವ ಕುರಿತು ಒಕ್ಕಣಿ ಇಲ್ಲ ಎಂದರೆ ಸರಿ ಸದರಿ ನಿಪಿ 19 ರಲ್ಲಿನ ಸ್ವತ್ತು ನಮ್ಮ

ತಂದೆಗೆ ಪಿತ್ರಾರ್ಜಿತವಾಗಿ ಬಂದು ಹೇಳಿಕೆಯ ಮೇರೆಗೆ ನಮ್ಮ ತಂದೆ ಹೆಸರಿಗೆ ಖಾತೆ ಆಗಿ ನಮ್ಮ ತಂದೆಯ ಸ್ವಂತ ಹಕ್ಕಿಗೆ ಸೇರಿ ಸಾಗುವಳಿ ಮಾಡುತ್ತಿರುವ ಜಮೀನು ಎಂದು ನಮೂದಾಗಿದೆ ಎಂದರೇ ಸರಿ. ಸಾಕ್ಷಿ ಮುಂದುವರೆದು ಸದರಿ ಜಮೀನನ್ನು ನಮ್ಮ ತಾತ ಮಾರಾಟ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ.

4. ಸದರಿ ನಿಪಿ 19 ರ ಜಮೀನುನ್ನು ಹೆಣ್ಣು ಮಕ್ಕಳ ಮದುವೆಗೆ ಮಾಡಿದ ಸಾಲವನ್ನು ತೀರಿಸಲು ನಮ್ಮ ತಾತ ಮಾರಾಟ ಮಾಡಿರುತ್ತಾರೆ. ಸದರಿ ಒಕ್ಕಣೆ ಇರುವ ಕುರಿತು ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ಎಲ್ಲಾ ಹೆಣ್ಣು ಮಕ್ಕಳಿಗೂ ಪಾಲು ಇದೆ ಎಂದರೆ ಸರಿ. ಸದರಿ ಮಾರಾಟ ಮಾಡಿರುವ ಕುರಿತು ಅವರ ಹೆಣ್ಣುಮಕ್ಕಳಿಗೆ ತಿಳಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

**5**. ನಮ್ಮ ತಂದೆ ಶ್ರೀನಿವಾಸರವರಿಗೆ ಯಾವ ದಾಖಲೆಯ ಮೂಲಕ ಜಮೀನು ಬಂದಿದೆ ಎಂದು ತೋರಿಸು ಯಾವುದೇ ದಾಖಲೆಯನ್ನು ನೀಡಿಲ್ಲ. ನಿಪಿ 19 ರ ಜಮೀನಿನ ಕುರಿತು ಯಾವುದೇ ರೀತಿಯ ವಿಭಾಗ ಆಗಿಲ್ಲ ಎಂದರೆ ಸರಿ. ಸದರಿ ನಿಪಿ 19 ರ ಜಮೀನಿನಲ್ಲಿ ಎಲ್ಲಾ ಮಕ್ಕಳಿಗೂ ಪಾಲು ಇದೆ ಎಂದರೆ ಸರಿ.

6. ನಮ್ಮ ತಂದೆ ಶ್ರೀನಿವಾಸ ಅವರ ಸಹೋದರ ಸಹೋದರಿಯರಿಗೆ ಮೋಸ ಮಾಡುವ ಉದ್ದೇಶದಿಂದ ನಿಪಿ 19 ರ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳು ದಾವೆಯನ್ನು ಸಲ್ಲಿಸಿರುವ ಕುರಿತು ನನಗೆ 2016 ರಲ್ಲಿ ತಿಳಿದು ಬಂದಿರುತ್ತದೆ. ಎಲ್ಲಾ 7 ದಾವಾ ಷೆಡ್ಯೂಲ್ ಸ್ವತ್ತುಗಳು ಸಹ ಕೆಂಚೆಗೌಡರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮರಣ ಶಾಸನ ಬರೆದು ಕೊಟ್ಟಿರುವ ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳಾಗಿದ್ದು ಉಳಿದ ಆಸ್ತಿಗಳು ಪಿತ್ರಾಶಜಿತ ಆಸಿಗಳಾಗಿರುತ್ತವೆ ಎಂದು ತಿಳಿಸಿರುತ್ತಾರೆ.

7. ಸದರಿ ಮರಣ ಶಾಸನ ಪತ್ರ ಬರೆದು ಕೊಟ್ಟಿರುವ ಸ್ವತ್ತುಗಳು ನಮ್ಮ ತಾತನಿಗೆ ವರ್ಗಾವರ್ಗಿಯ ಮುಖಾಂತರ ಬಂದಿರುತ್ತವೆ. ಆ ಕುರಿತು ಮರಣ ಶಾಸನ ಪತ್ರದಲ್ಲಿ ನಮೂದು

ಮಾಡಿರುವುದಿಲ್ಲ. ಸದರಿ ವರ್ಗಾವರ್ಗಿ ಪತ್ರವನ್ನು ನಾನು ನೋಡಿರುವುದಿಲ್ಲ. ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

8. ನಿಡಿ 1 ನಮ್ಮ ತಾತನ ಪೆಟ್ಟಿಗೆಯಲ್ಲಿದ್ದು ಅವರು ಮೃತಪಟ್ಟ ನಂತರ ನಮ್ಮ ಕೈಗೆ ದೊರಕಿರುತ್ತದೆ. 2003 ರಲ್ಲಿ ನನಗೆ 8 ವರ್ಷ ವಯಸ್ಸಾಗಿರುತ್ತದೆ. ಆ ಸಮಯದಲ್ಲಿ ನಮ್ಮ ತಾತನ ಆರೋಗ್ಯ ಚೆನ್ನಾಗಿತ್ತು. ಸದರಿ ಸಮಯದಲ್ಲಿ ನಮ್ಮ ತಾತ ಪಾರ್ಶವಾಯು ಪೀಡಿತರಾಗಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಂತರ ಅವರ ಸುಧಾರಿಸಿಕೊಂಡು ಚೆನ್ನಾಗಿದರು. 2003 ನೇ ಇಸವಿಯಲ್ಲಿ ಅವರು ಸಹಿ ಮತ್ತು ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಿದ್ದರು.

**9.** ನಮ್ಮ ತಂದೆಯು ಸಹ ನ್ಯಾಯಾಲಯಕ್ಕೆ ಹಾಜರಾಗಿ ಪ್ರತಿವಾದಿ ಪತ್ರವನ್ನು ಸಲ್ಲಿಸಿದ್ದರು ಎಂದರೆ ಸರಿ. ನಾನು ಪ್ರತಿವಾದ ಪತ್ರದಲ್ಲಿರುವ ಒಕ್ಕಣೆಯನ್ನು ನಾನು ತಿಳಿದುಕೊಂಡಿದ್ದೇನೆ. ಪ್ರತಿವಾದ ಪತ್ರದಲ್ಲಿ ನಮ್ಮ ತಾತನಿಗೆ ದಾವಾ 4 ಮತ್ತು7 ಸ್ವತ್ತುಗಳು ವರ್ಗಾವರ್ಗಿಯ ಮುಖಾಂತರ ಬಂದಿವೆ ಎಂದು ತಿಳಿಸಿಲ್ಲ. ದಾವಾ ಸ್ವತ್ತಿನ 4 ನೇ ಐಟಂ ನ ಸರ್ವೇ ನಂಬರ 486 ರಲ್ಲಿ ಒಟ್ಟು 4 ಎಕರೆ 28 ಗುಂಟೆ ಜಮೀನು ಇದೆ ಎಂದರೇ ಸರಿ.

10. ಸದ ರಿ ಸ ನಂ 486 ರ ಸಂಪೂರ್ಣ 4 ಎಕರೆ 28 ಗುಂಟೆ ಜಮೀನು ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಎಲ್ಲಾ ಸಂಪೂರ್ಣ ಆಸ್ತಿಯು ವರ್ಗಾವರ್ಗಿಯ ಮುಖಾಂತರ ಬಂದಿರುತ್ತದೆ. ನಮ್ಮ ತಾತ ಯಾರೊಂದಿಗೆ ವರ್ಗಾವರ್ಗಿಯ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕೆಂಚೆಗೌಡ ಮತ್ತು ಅವರ ಮಕ್ಕಳ ನಡುವೆ ಯಾವುದೇ ಮೌಖಿಕವಾಗಿ ಯಾಗಲಿ ಅಥವಾ ಯಾವುದೇ ದಾಖಲೆಯ ಮುಖಾಂತರ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. 1994 ರಲ್ಲಿ ಮೌಖಿಕವಾಗಿ ವಿಭಾಗವಾಗಿರುತ್ತದೆ. ನಾನು ಹೇಳಿದಂತೆ 1994 ರಲ್ಲಿ ಯಾವುದೇ ಮೌಖಿಕ ವಿಭಾಗವಾಗಿಲ್ಲ ಎಂದರೆ ಸರಿಯಲ್ಲ.

11. ನಾನು ನನ್ನ ಪ್ರತಿವಾದ ಪತ್ರದಲ್ಲಿ 1998-99 ವರ್ಷದಲ್ಲಿ ಮೌಖಿಕವಾಗಿ ವಿಭಾಗವಾಗಿದೆ ಎಂದು ತಿಳಿಸಿದ್ದು ಅದು ಸರಿಯಾಗಿರುತ್ತದೆ. ನಿಪಿ 7 ರ ಪ್ರಕಾರ ನಾವು ಮೋಸದಿಂದ

ಖಾತೆಯನ್ನು ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1993-94 ರಲ್ಲಿ ನಿಪಿ 7 ರಂತೆ ಯಾವುದೇ ವಿಭಾಗವಾಗಿಲ್ಲ ಎಂದರೆ ಸರಿಯಲ್ಲ. ನಮ್ಮ ತಾತ 2006 ರಲ್ಲಿ ಮೃತಪಟ್ಟಿರುತ್ತಾರೆ. ನಾನು ನಮ್ಮ ತಾತ ಕಾಲವಾದ ನಂತರ ನಾನು ಸದರಿ ಮರಣ ಶಾಸನ ಪತ್ರದ ಮೇರೆಗೆ ಯಾವುದೇ ಅರ್ಜಿಯನ್ನು ನೀಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ನಾನು ಅಪ್ರಾಪ್ತನಾದ ಕಾರಣ ಅರ್ಜಿಯನ್ನು ನೀಡಿರುವುದಿಲ್ಲ ಎಂದು ತಿಳಿಸಿರುತ್ತಾರೆ.

12 ನಾನು 2013 ನೇ ಇಸವಿಯಲ್ಲಿ ಪ್ರಾಪ್ತ ವಯಸ್ಕನಾಗಿರುತ್ತೇನೆ. 2013 ರಲ್ಲಿ ನನಗೆ ದಾವೆಯ ಕುರಿತು ತಿಳಿದಿರುವುದಿಲ್ಲ ಆ ಸಮಯದಲ್ಲಿ ನಮ್ಮ ತಂದೆ ಮನೆಗೆ ಬರುತ್ತಿದ್ದರು. ನಾನು 2015-16 ರಲ್ಲಿ ನಾನೇ ಅರ್ಜಿಯನ್ನು ಸಲ್ಲಿಸಿ ದಾವೆಯಲ್ಲಿ ಸೇರಿಕೊಂಡಿದ್ದೇನೆ ಎಂದರೆ ಸರಿ. ನಮ್ಮ ತಂದೆಯ ಮಾಹಿತಿಯ ಮೇರೆಗೆ ಸೇರಿಕೊಂಡಿದ್ದೇನೆ ಎಂದರೆ ಸರಿ.

13. ನಿಡಿ 1 ರಲ್ಲಿ ವಿಭಾಗದ ಕುರಿತು ಯಾವುದೇ ಒಕ್ಕಣಿ ಇಲ್ಲ ಎಂದರೆ ಸರಿ. ನಮ್ಮ ತಾತನಿಗೆ ಪಾರ್ಶ್ವವಾಯು ರೋಗದಿಂದ ಬಳಲುತ್ತಿದ್ದ ಕಾರಣ ಅವರಿಗೆ ಯಾವುದು ಸರಿ ತಪ್ಪು ಎಂದು ಗೊತ್ತಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಡಿ 1 ರಲ್ಲಿ ಸ್ವಯಾರ್ಜಿತ ಆಸ್ತಿ ಎಂದು ನಮೂದಾಗಿದ್ದು ಆ ಕುರಿತು ಯಾವುದೇ ಕ್ರಯ ಪತ್ರ ಇರುವುದಿಲ್ಲ. ಸ ನಂ 586 ರಲ್ಲಿ ಒಟ್ಟು 13 ಗುಂಟೆ ವಿಸ್ತೀರ್ಣ ಇದ್ದು 2 ಗುಂಟೆ ನಾಲೆಗೆ ಹೋಗಿದ್ದು ಪ್ರಸ್ತುತ 11 ಗುಂಟೆ ಇರುತ್ತದೆ.

**14**. 2 ಗುಂಟೆ ನಾಲೆಗೆ ಹೋಗಿರುವ ಜಮೀನಿಗೆ ಪರಿಹಾರವನ್ನು ನಮ್ಮ ತಾತ ಕೆಂಚೆಗೌಡರು ಪಡೆದುಕೊಂಡಿರುತ್ತಾರೆ. ಮರಣ ಶಾಸನದ ಪತ್ರದಲ್ಲಿ ಸಂಪುರ್ಣ 13 ಗುಂಟೆಗೆ ಬರೆದಿರುತಾತರೆ ಎಂದರೆ ಸರಿ. 2003 ನೇ ಇಸವಿಯಲ್ಲಿ ನಮ್ಮ ತಂದೆ ಶ್ರೀನಿವಾಸವರು ನಮ್ಮ ಜೊತೆಯಲ್ಲಿದ್ದರು ಎಂದರೆ ಸರಿ. ಆ ಸಮಯದಲ್ಲಿ ಶ್ರೀನಿವಾಸರವರೆದ್ದೇ ಸಂಪೂರ್ಣ ಜವಾಬ್ದಾರಿ ಮತ್ತು ಉಸ್ತುವಾರಿಯನ್ನು ವಹಿಸಿಕೊಂಡಿದ್ದರು ಎಂರದೆ ಸರಿಯಲ್ಲ. ನಮ್ಮ ತಾತ ಕೆಂಚೆಗೌಡರೇ ಸಂಪೂರ್ಣ ಮನೆಯ ಜವಾಬ್ದಾರಿಯನ್ನು ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ.

15. ವಾದಿಗಳು ಯಾವೆಲ್ಲ ಜಮೀನುಗಳ ಮೇಲೆ ದಾವೆಯನ್ನು ವಿಭಾಗಕ್ಕಾಗಿ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿದೆ. ನಿಡಿ 1 ನ್ನು ಮಾಡಿಸಲು ನಮ್ಮ ತಂದೆ ನಮ್ಮ ತಾತನನ್ನು

ಕರೆದುಕೊಂಡು ಹೋಗಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪತ್ರಕ್ಕೆ ಸಾಕ್ಷಿದಾರರಾಗಿ ವಿಷಕಂಠೇಗೌಡ ಮತ್ತು ನಿಂಗರಾಜು ರವರು ಸಹಿ ಮಾಡಿರುತ್ತಾರೆ. ಸದರಿಯವರು ಊರಿನ ಗ್ರಾಮಸ್ಥರಾಗಿರುತ್ತಾರೆ. ಸದರಿ ನಿಡಿ 1 ನ್ನು ನಮ್ಮ ತಂದೆ ಮತ್ತು ನಮ್ಮ ತಾತ ಶಾಮೀಲಾಗಿ ಬೇರೆ ಮಕ್ಕಳಿಗೆ ಮೋಸ ಮಾಡುವ ಉದ್ದೇಶದಿಂದ ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದರಿಂದ ಕಾಲಾವಕಾಶವನ್ನು ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ